


ಗಣೇಶ್ ಅರಳೀಕಟ್ಟೆ

# ಪಾಪದ ಫಲ

■ ದೀಪಾ ಕುಬಸದ್, ಶಿವಮೊಗ್ಗ

ಒಂದು ದಿನ ಕಾಡಿನ ರಾಜ ಸಿಂಹ ಪ್ರಾಣಿಗಳ ಸಭೆ ಕರೆಯಿತು. ಪ್ರಾಣಿಗಳೆಲ್ಲ ಬಂದು ದೊಡ್ಡ ಆಲದ ಮರದ ಕೆಳಗೆ ಸೇರಿದವು. 'ಮಹಾಮಂತ್ರಿಗಳೇ, ಇತ್ತೀಚಿನ ಸಮಾಚಾರ ಏನು?' ಎಂದು ನರಿಯನ್ನು ಕೇಳಿತು. ಆಗ ನರಿಯು 'ನಮ್ಮ ಕಾಡಿನಲ್ಲಿ ಎಲ್ಲ ಪ್ರಾಣಿಗಳು ಕ್ಷೇಮವಾಗಿ, ಸಂತೋಷದಿಂದಿವೆ' ಎಂದು ಹೇಳಿತು. 'ಹೌದೇ? ಅದರಲ್ಲಿ ವಿಶೇಷವೇನಿದೆ?' ಎಂದಿತು ಸಿಂಹ.

ಆಗ ನರಿಯು 'ಸಿಂಹ ರಾಜ ಇತ್ತೀಚೆಗೆ ನಮ್ಮ ಕಾಡಿನ ಒಳಗಾಗಲಿ, ಸುತ್ತಮುತ್ತಲಾಗಲಿ ಯಾವ ಮನುಷ್ಯನು ಬರದೇ ಇರುವುದೇ ಇದರ ವಿಶೇಷ' ಎಂದಿತು. 'ಹ್ಞಾ! ಇದಕ್ಕೆ ಕಾರಣವೇನು?' ಎಂದು ಸಿಂಹ ಕೇಳಿತು. ಆಗತಾನೆ ಊರಿನ ಕಡೆಯಿಂದ ಬಂದ ಕೋತಿಗಳ ಗುಂಪಿನ ಒಂದು ಕೋತಿಯು 'ಸಿಂಹ ರಾಜ ನಮ್ಮ ಕಾಡಿನ ಸುತ್ತಮುತ್ತ ಇರುವ ಊರಿನಲ್ಲಿ ಹೊಗೆ ಬಿಡುವ ವಾಹನಗಳಾಗಲೀ, ಮನುಷ್ಯರಾಗಲೀ ಓಡಾಡುವುದು ಕಾಣಿಸುತ್ತಿಲ್ಲ' ಎಂದಿತು.

'ಯಾಕೆ? ಏನಾಯಿತು ಅಲ್ಲಿ?' ಎಂದಾಗ ಹಿರಿಯ ಕೋತಿಯು 'ಊರುಗಳಲ್ಲಿ ಕೊರೊನಾ ಎಂಬ ರೋಗ ಬಂದಿದೆ. ಉಸಿರಾಡಲು ತೊಂದರೆ ಆಗಿ ಜನ ಸಾಯುತ್ತಿದ್ದಾರೆ. ಉಳಿದವರು ತಮ್ಮ ಪ್ರಾಣ ಕಾಪಾಡಿಕೊಳ್ಳಲು ಮನೆ ಒಳಗೆ ಬಂಧಿಯಾಗಿದ್ದಾರೆ' ಎಂದಿತು. ಆಗ ಸಿಂಹರಾಜ 'ನಮಗಿಂತ ಕ್ರೂರಿಯಾದ ಆ ಮಾನವ ಗಿಡ, ಮರ, ಕಾಡನ್ನೆಲ್ಲ ನಾಶಮಾಡಿ ತನ್ನ ಈ ದುರ್ಗತಿಗೆ ತಾನೇ ಕಾರಣವಾಗಿದ್ದಾನೆ. ಅವನು ಮಾಡಿದ ಪಾಪದ ಫಲವನ್ನು ಅವನೇ ಅನುಭವಿಸಲಿ. ಇನ್ನು ಮುಂದೆ ನಮಗೆ ಆಶ್ರಯ ಕೊಟ್ಟ ಈ ಭೂಮಿ, ಈ ಕಾಡನ್ನು ನಾವು ಉಳಿಸಿಕೊಳ್ಳೋಣ. ಇಲ್ಲವಾದರೆ ನಾವು ಅವರಂತೆ ದುರಂತವನ್ನು ಅನುಭವಿಸಬೇಕಾಗುತ್ತದೆ. ಎಲ್ಲರೂ ಎಚ್ಚರದಿಂದಿರಿ, ನನ್ನ ಆಜ್ಞೆಯನ್ನು ತಪ್ಪದೇ ಪಾಲಿಸಿರಿ' ಎಂದು ಹೇಳಿ ಸಭೆಯನ್ನು ಮುಗಿಸಿತು. ■



ಚಂದ್ರ ಹೊಳ್ಳನಾಲಿ

# ಮಳೆಗಾಲ ಬಂತಪ್ಪ

■ ಸೋಮಲಿಂಗ ಬೇಡರ, ಆಳೂರ

ಮಳೆಗಾಲ ಬಂತಪ್ಪ
ಸಡಗರವ ತಂತಪ್ಪ
ಭೂತಾಯಿ ಮಡಿಲೆಲ್ಲ ತಂಪಾತಪ್ಪ
ಗುಡುಗುಡುಗಿ ಮೋಡಪ್ಪ
ಫಳಫಳಿಸಿ ಮಿಂಚಪ್ಪ
ದಳದಳನೆ ಸುರಿದಾನ ಮಳೆಯಪ್ಪ

ಖುಷಿಪಟ್ಟು ಭೂಮವ್ವ
ತೊಟ್ಟಾಳ ಹಸುರವ್ವ
ಏನ್ ಚಂದ ಕಣ್ತಾಳ ನೋಡವ್ವ
ಹೊಳೆಹಳ್ಳ ತುಂಬವ್ವ
ಹರಿದಾವ ಉಕ್ಕೆವ್ವ
ನೋಡಾಕ ಕಣ್ಣೆರಡು ಸಾಲ್ಲವ್ವ

ನಕ್ಕಾನ ರೈತಣ್ಣ
ಬಿತ್ತುತ್ತ ಹೊಲವಣ್ಣ
ನೆನೆಯುತ್ತ ಭೂತಾಯಿ ಋಣವಣ್ಣ
ಲೋಕಕ್ಕ ಒಳಿತಣ್ಣ
ಮಾಡಾಕ ನಮ್ಮಣ್ಣ
ದುಡಿಯುವನು ಹರಿಸುತ್ತ ಬೆವರಣ್ಣ

ಮಳೆಯಾದ್ರ ಚಂದಕ್ಕ
ಹೊಲತುಂಬ ರಂಗಕ್ಕ
ಹೊಡೆಹಿರದು ನಿಲ್ತಾವ ಬೆಳಿಯಕ್ಕ
ನನಸಾದ್ರ ಪಾಡಕ್ಕ
ಕಂಡಂಥ ಕನಸಕ್ಕ
ಹರಿತಾದ ಹಿಗ್ಗೀನ ಹೊಳೆಯಕ್ಕ